ಗಂಭೀರವಾಗಿ ಪದ್ಯ ಬರೆಯಲು ನನಗೆ ಸಾಧ್ಯವಾದದ್ದು ಈಗ್ಗೆ ಐದು ವರ್ಷಗಳ ಕೆಳಗೆ. ನನಗಾಗ ಹೆಚ್ಚು ಕಡಿಮೆ ಮೂವತ್ತು ವರ್ಷ. ನನ್ನ ಮಾಜಿ ಗಂಡನೊಂದಿಗೆ ಸುಮಾರು ಹತ್ತು ವರ್ಷಗಳ ಸುದೀರ್ಘ ಸಂಬಂಧ ನನ್ನದು.ಅಷ್ಟೂ ವರ್ಷಗಳಲ್ಲಿ ನನ್ನ ವ್ಯಕ್ತಿತ್ವ ಇಬ್ಭಾಗವಾದಂತೆ ಅನಿಸುತ್ತಿತ್ತು. ಅಸ್ತಿತ್ವವೇ ಇರಲಿಲ್ಲ. ಐದು ವರ್ಷಗಳ ಹಿಂದೆ ಧ್ಯಾನ ಮಾಡುವುದನ್ನು ಅಭ್ಯಾಸ ಮಾಡಿಕೊಂಡೆ. ನನ್ನ ನಿಜವಾದ ವ್ಯಕ್ತಿತ್ವ ಹೊರಬರಲು, ನನ್ನನ್ನ ನಾನು ಹೆಚ್ಚು ಅನುಭವಿಸಿ ಅರ್ಥಮಾಡಿಕೊಳ್ಳಲು ಇದು ಅವಕಾಶ ಮಾಡಿಕೊಟ್ಟಿತು. ಜೊತೆಗೆ ಅಪ್ಪ ಸಾಹಿತ್ಯದ ಸ್ಕಾಲರ್. ನಮ್ಮ ನಡುವಿನ ಪ್ರತಿ ಸಂಭಾಷಣೆಯು ಸಾಹಿತ್ಯಿಕ ಒಳನೋಟದಿಂದ ತುಂಬಿರುತ್ತಿತ್ತು. ಇವೆಲ್ಲ ಕವಿಯಾಗಲು ನನ್ನನ್ನ ಪ್ರೇರೇಪಿಸಿರಬಹುದು.

**◆ ತೈವಾನಿನ ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಹೇಗಿದೆ?**

ಇಲ್ಲಿ 6ರಿಂದ 15 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ. ತೈವಾನ್‌ನ ಶಿಕ್ಷಣ ವ್ಯವಸ್ಥೆಯು ಮೂಲಭೂತ ಶಿಕ್ಷಣದ ಸಾರ್ವತ್ರಿಕತೆ ಮತ್ತು ಸಮಾನತೆಗೆ ಒತ್ತು ನೀಡುತ್ತದೆ. ಮೂಲಭೂತ ಜ್ಞಾನ ಮತ್ತು ನೈತಿಕ ಶಿಕ್ಷಣವನ್ನು ಈ ಹಂತದ ಪಠ್ಯಕ್ರಮ ಒಳಗೊಂಡಿರುತ್ತದೆ. ನಮ್ಮದು ಮೂಲತಃ Innovative approach ಇರುವ ಕೌಶಲ ಆಧಾರಿತ ಶಿಕ್ಷಣ. ಪ್ರೌಢ ಶಾಲಾ ಹಂತದಿಂದ ಶಿಕ್ಷಣವೂ ಕವಲೊಡೆಯುತ್ತದೆ. ಇಲ್ಲಿಂದ ವಿದ್ಯಾರ್ಥಿಗಳು ಸಾಮಾನ್ಯ ಪ್ರೌಢಶಿಕ್ಷಣ, ವೃತ್ತಿಯಾಧಾರಿತ ಪ್ರೌಢಶಿಕ್ಷಣ ಅಥವಾ ತಾಂತ್ರಿಕ ಶಿಕ್ಷಣವನ್ನು ಆಯ್ಕೆ ಮಾಡಿಕೊಳ್ಳಬಹುದು. ನಮ್ಮಲ್ಲಿ ಹೈಸ್ಕೂಲ್ ಶಿಕ್ಷಣ ಮುಗಿದ ನಂತರ ವಿದ್ಯಾರ್ಥಿಗಳು ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳುತ್ತಾರೆ.

**◆ ತೈವಾನಿನ ಸಾರ್ವಜನಿಕ ಜೀವನದಲ್ಲಿ ಹೆಣ್ಣು ಮಕ್ಕಳ ಪಾಲುದಾರಿಕೆ ಯಾವ ರೀತಿ ಇದೆ ?**

ತೈವಾನಿನ ಬಹುತೇಕ ಮಹಿಳೆಯರು ಪವರ್‌ಫುಲ್. ನಾವು ಹೆಂಡತಿಯರು, ತಾಯಂದಿರು ಹಾಗೆಯೇ ನೌಕರಸ್ಥರು ಮತ್ತು ಉದ್ಯಮಿಗಳು. ಒಳ–ಹೊರಗೆ ಮಹಿಳೆಯರು ನಿಭಾಯಿಸುತ್ತಿರುವ ಈ ಪಾತ್ರಗಳು ಅವರನ್ನು ಚೈತನ್ಯವಂತರನ್ನಾಗೂ, ಸದೃಢರನ್ನಾಗೂ ಮಾಡಿವೆ. ಸ್ಥಳೀಯ ಪರಂಪರೆಯಲ್ಲಿ ಮಾತ್ರ ಪ್ರಧಾನ ಸಮಾಜಗಳನ್ನು ಕಾಣಬಹುದು. ಹಾಗಾಗಿ, ತೈವಾನಿನ ಮಹಿಳೆಯರ ಧ್ವನಿ ಸಮಾಜದಲ್ಲಿ ಬಲವಾಗಿದೆ.

**◆ ಚೀನಾದ ಜೊತೆಗಿನ ನಿಮ್ಮ ಅಂತರರಾಷ್ಟ್ರೀಯ ಸಂಬಂಧ ಬಲು ಸೂಕ್ಷ್ಮವಾದದ್ದು. ಇದನ್ನು ಒಬ್ಬ ಕವಿಯಾಗಿ ಹೇಗೆ ವಿಶ್ಲೇಷಿಸುತ್ತೀರಿ?**

ಒಬ್ಬ ಕವಿಯಾಗಿ, ನನಗೆ ಅತ್ಯಂತ ಮುಖ್ಯವಾದುದು ‘ಮಾನವ ಹಕ್ಕುಗಳು’. ಆದರೆ, ಚೀನಾದ ಆಡಳಿತ ಹೇಗಿದೆಯೆಂದರೆ, ಮನುಷ್ಯನ ಮೂಲಭೂತ ಹಕ್ಕುಗಳಿಗೆ ಅನ್ಯಾಯವಾಗುತ್ತಿದೆ. ತನ್ನ ನೆರೆಹೊರೆ ದೇಶಗಳ ಕುರಿತು ನವ ವಸಾಹತುಶಾಹಿ ಧೋರಣೆಯುಳ್ಳ ಚೀನಾ, ಈಗ ಕಮ್ಯುನಿಸ್ಟ್ ರಾಷ್ಟ್ರವಾಗಿ ಉಳಿದಿಲ್ಲ. ಉದಾಹರಣೆಗೆ, State Owned Organs ಎಂಬ ಸಾಕ್ಷ್ಯಚಿತ್ರವು ಇದನ್ನು ಸ್ಪಷ್ಟವಾಗಿ ತೋರಿಸುತ್ತದೆ. ತೈವಾನ್ ಮತ್ತು ಚೀನಾ ನಡುವಿನ ವ್ಯತ್ಯಾಸವೆಂದರೆ ನಮ್ಮದು ಪ್ರಜಾಪ್ರಭುತ್ವ ಮತ್ತು ಮುಕ್ತ ಆಡಳಿತವಿರುವ ವ್ಯವಸ್ಥೆ. ಆದರೆ ಚೀನಾದಲ್ಲಿ ಕಮ್ಯುನಿಸ್ಟ್ ಸರ್ವಾಧಿಕಾರವಿದೆ. ತೈವಾನ್ ಅನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಅವರು ಅನೇಕ Extreme ವಿಧಾನಗಳನ್ನು ಬಳಸುತ್ತಾರೆ. ತೈವಾನಿನ ಮೂರು ತಲೆಮಾರುಗಳ ಜನರು ಮತ್ತೆ ಮತ್ತೆ ಎದುರಿಸುತ್ತಿರುವ ಬಗೆಹರಿಯದ ರಾಜತಾಂತ್ರಿಕ ಸಮಸ್ಯೆ ಇದಾಗಿದೆ. ಈ ಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವವು ಚೀನಾ ಮತ್ತು ಅಮೆರಿಕದ ನಡುವೆ ಅಡಕತ್ತರಿಯಲ್ಲಿ ಸಿಕ್ಕಿಹಾಕಿಕೊಂಡ ಹಾಂಗ್ ಕಾಂಗ್‌ನಂತಾಗಬಾರದು!

**◆ ತೈವಾನಿನ ಹೊಸ ತಲೆಮಾರಿನ ಕಾವ್ಯದ ವಸ್ತು - ವಿಷಯ, ನಿರೂಪಣಾ ಕ್ರಮ ಹಾಗೂ ಆಶೋತ್ತರಗಳೇನು?**

‘ನಾದ ಕಾವ್ಯ’ ಎಂಬುದು ತೈವಾನ್‌ನ ಇವತ್ತಿನ ಟ್ರೆಂಡ್ ‘verse without words’ ಎಂಬುದು ಇದರ ಧ್ಯೇಯವಾಕ್ಯ. ಸಾಹಿತ್ಯ ಹಾಗೂ ಸಂಗೀತದ ಗುಣಗಳನ್ನು ಒಂದು ಹದದಲ್ಲಿ ಬೆಸೆಯುತ್ತಿರುವ ಮನುಷ್ಯ ಧ್ವನಿಯ ಕಲಾತ್ಮಕ ಅಭಿವ್ಯಕ್ತಿ. ಒಂದು ರೀತಿಯ Rap Poetry! ಅನೇಕ ಯುವ ಕವಿಗಳು ತಮ್ಮ ಕೃತಿಗಳಲ್ಲಿ ತೈವಾನಿನ ಸಾಮಾಜಿಕ ಹಾಗೂ